ದಿನಾಂಕಃ16-11-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಹೆಚ್ ಎನ್ ಜಿ ವಕೀಲರಿಂದಃ**

ನನ್ನನ್ನು ಈ ದಿನ ನ್ಯಾಯಾಲಯಕ್ಕೆ ವಾದಿಯವರು ಸಾಕ್ಷಿ ನುಡಿಯಲು ಕರೆತಂದಿರುತ್ತಾರೆ. ಸಿದ್ದಾಪುರದಲ್ಲಿರುವ ಸರ್ವೆ ನಂ 11 ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ರಾಮಾನಾಯ್ಕನ ಮಗನಾದ ಶಿವಾನಾಯ್ಕ ಸಾಗು ಮಾಡುತ್ತಿದ್ದು. ಉಳಿದ 1 ಎಕರೆ 10 ಗುಂಟೆ ಜಮೀನನ್ನು ಲಕ್ಷ್ಮನಾಯ್ಕನ ಮಗನಾದ ಅಶೋಕನಾಯ್ಕ ಸಾಗು ಮಾಡುತ್ತಿದ್ದಾರೆ. ಈ ದಾವೆಯ ವಾದಿ ನಾನು ಮೇಲ್ಕಂಡತೆ ಸಾಕ್ಷ್ಯ ನುಡಿಯಲು ನನಗೆ ಹೇಳಿ ಕರೆತಂದಿರುತ್ತಾರೆ ಎಂದರೆ ಸರಿ. ವಾದಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನನ್ನನ್ನು ಕರೆದಿದ್ದರಿಂದ ಬಂದಿರುತ್ತೇನೆ.

ನಾನು ವ್ಯವಸಾಯಗಾರ. ನಾನು ಬೇರೆಯವರ ಜಮೀನನ್ನು ಗುತ್ತಿಗೆಗೆ ಪಡೆದು ಮಾಡುತ್ತೇನೆ. ಮತ್ತು ಅಡಿಕೆ ಖೇಣಿಯನ್ನು ಸಹ ಮಾಡುತ್ತೇನೆ. ಸದರಿ ಗುತ್ತಿಗೆಗಾಗಿ ಜಮೀನನ್ನು ಪಡೆಯುವಾಗ ಬಾಯಿ ಮಾತಿನ ಮೂಲಕ ಮಾಡುತ್ತೇವೆ. ಗುತ್ತಿಗೆಯ ಕಾಲಾವಧಿ ಮುಗಿದ ನಂತರ ಜಮೀನಿನ ಮಾಲೀಕರಿಗೆ ಸ್ವಾಧೀನವನ್ನು ವರ್ಗಾಯಿಸುತ್ತೇನೆ. ನಾನು ಸಲ್ಲಿಸಿರುವ ಪ್ರಮಾಣಪತ್ರ ನನ್ನದೇ, ನಾನು ಸಲ್ಲಿಸಿರುವ ಪ್ರಮಾಣ ಪತ್ರ ಇಂಗ್ಲೀಷ್ ನಲ್ಲಿದ್ದು ಅದರಲ್ಲಿರುವ ಮಾಹಿತಿ ನನಗೆ ಗೊತ್ತಿಲ್ಲ. ನಾನು ನನ್ನ ಪ್ರಮಾಣಪತ್ರದಲ್ಲಿ ಸಲ್ಲಿಸಿರುವ ಪ್ಯಾರ 2 ರಲ್ಲಿನ ಸಂಗತಿ ನಿಜ. ಸದರಿ ದಾವಾಸ್ತಿಗೆ 2 ಸರ್ವೆ ನಂಬರುಗಳಿದ್ದು ಅದರಲ್ಲಿ ಸರ್ವೆ ನಂ 11/1 ಎಂದು ಮತ್ತು ಸರ್ವೆ ನಂ 11/1 ಪಿ2 ಎಂದು ಇದ್ದು ಇದರಲ್ಲಿ ದಾವಾಸ್ತಿಯ ಸರ್ವೆ ನಂ ಯಾವುದು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಸರ್ವೆ.ನಂ 11 ಎಂದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನನಗೆ ದಾವಾಸ್ತಿಯ ಬಗ್ಗೆ ಪೂರ್ಣ ಮಾಹಿತಿ ಇದೆ. ವಾದಿಯ ಜಮೀನಿನ ಪಕ್ಕ ನನಗೆ ಸೇರಿದ ಸರ್ವೆ ನಂ 12 ರಲ್ಲಿ 1 ಎಕರೆ 10 ಗುಂಟೆ ಜಮೀನು ಇದೆ. ನಾನು ಈಗ ಸಾಗು ಮಾಡುತ್ತಿರುವ ಜಮೀನು ನನ್ನ ಅಣ್ಣನಾದ ಶಂಕರನಾಯ್ಕನ ಹೆಸರಿನಲ್ಲಿ ಇದೆ. ಸದರಿ ಜಮೀನನ್ನು ನನ್ನ ತಂದೆ ಯಾರೋ ಮುಸ್ಲಿಂರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಮಾರಾಟಗಾರರ ಹೆಸರು ನನಗೆ ಗೊತ್ತಿಲ್ಲ. ನಾನುಈಗ ಸ್ವಾಧೀನಾನುಭವದಲ್ಲಿರುವ ಸರ್ವೆ ನಂ 12 ರಲ್ಲಿ 1 ಎಕರೆ 10 ಗುಂಟೆ ಜಮೀನಿನಲ್ಲಿ ನಾನು ಮುಕ್ಕಾಲು ಎಕರೆ ಜಮೀನನ್ನು ನನ್ನ ಇನ್ನೊಬ್ಬ ಅಣ್ಣನಾದ ಸ್ವಾಮಿನಾಯ್ಕ ಎನ್ನುವವರಿಂದ ಸುಮಾರು 12 ವರ್ಷಗಳ ಹಿಂದೆ ಖರೀದಿಸಿರುತ್ತೇನೆ. ನಾನು ಸದರಿ ಸ್ವಾಮಿನಾಯ್ಕ ಎನ್ನುವವರಿಂದ ಜಮೀನನ್ನು ಖರೀದಿಸಿದಾಗಿನಿಂದ ಸದರಿ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಮುಂದುವರೆಯುತ್ತಿದ್ದೇನೆ ಎಂದರೆ ಸಾಕ್ಷಿ ಅದಕ್ಕೂ ಮುಂಚಿನಿಂದಲೂ ಸುಮಾರು 20 -25 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದೆನೆ ಎಂದು ನುಡಿಯುತ್ತಾರೆ.

ದಾವಾಸ್ತಿ ಮೂಲತಃ ಯಾರ ಹೆಸರಿಗೆ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ರಾಮನಾಯ್ಕನ ಜಮೀನು ಅತನ ಹೆಸರಿಗೆ ಮತ್ತು ಲಕ್ಷ್ಮನಾಯ್ಕನ ಜಮೀನು ಲಕ್ಷ್ಮನಾಯ್ಕನ ಹೆಸರಿಗೆ ಮಂಜೂರಾಗಿದೆ ಎಂದು ನುಡಿಯುತ್ತಾರೆ.

ನ್ಯಾ. ಪ್ರಶ್ನೆಃ1 ಸದರಿಯವರಿಗೆ ಜಮೀನು ಮಂಜೂರಾದ ಬಗ್ಗೆ ಯಾವುದಾದರೂ ದಾಖಲೆ ನೋಡಿದ್ದೀರ ಎಂದರೆ ?

ಉತ್ತರಃ ಇಲ್ಲ.

ಸದರಿಯವರ ಹೆಸರಿಗೆ ಸಾಗುವಳಿ ಚೀಟಿ ಮಂಜೂರಾಗಿರುವ ಬಗ್ಗೆಯಾ ಸಹ ನನಗೆ ಗೊತ್ತಿಲ್ಲ. ದಾವಾಸ್ತಿಯ ಮೂಲ ಮಂಜೂರಾತಿದಾರಲ್ಲಿ ರಾಮನಾಯ್ಕರವರಿಗೆ 3 ಜನ ಮಕ್ಕಳು. 1 ಉಮಾಪತಿ ಶಿಕ್ಷಕರು 2. ಕೃಷಾನಾಯ್ಕ್ ಮತ್ತು 3 ನೇ ಯವರು ಶಿವಾನಾಯ್ಕ, ವಿಜೀ ಬಾಯಿ ಎನ್ನುವ ಒಬ್ಬಳು ಹೆಣ್ಣು ಮಗಳಿದ್ದಾರೆ. ರಾಮನಾಯ್ಕರವರು ಮೃತಪಟ್ಟ ದಿನಾಂಕ ನನಗೆ ಗೊತ್ತಿಲ್ಲ. ರಾಮಾನಾಯ್ಕರ ಅಣ್ಣ ತಮ್ಮಂದಿರು ಯಾವಾಗ ಬೇರ್ಪಟ್ಟರು ಎಂದರೆ ಸಾಕ್ಷಿ ಅವರ ತಂದೆಯ ಜೀವಿತಾವಧಿಯಲ್ಲಿಯೇ ಬೇರ್ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ರಾಮಾನಾಯ್ಕರ ಅಣ್ಣ ತಮ್ಮಂದಿರಲ್ಲಿ ದ್ಯಾವ್ಲನಾಯ್ಕ ಎನ್ನುವವರು ಹಿರಿಯವರು. ದಾವಾಸ್ತಿಯನ್ನು ದ್ಯಾವ್ಲನಾಯ್ಕರವರಿಗೆ ವಾದಿಯ ತಂದೆ ಲಕ್ಷ್ಮನಾಯ್ಕ ಎನ್ನುವವರು ಮೌಖಿಕವಾಗಿ ಕಾಳುಗುತ್ತಿಗೆಗೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಮೂಲ ಮಂಜೂರಾತಿದಾರರು ಅವರ ವಾರಸುದಾರರಿಗಾಗಲಿ ಅಥವಾ ಬೇರೆಯವರಿಗಾಗಲಿ ದಾವಾಸ್ತಿಯನ್ನು ವಿಲೇವಾರಿ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

ನಿಪಿ-2 ರಲ್ಲಿ ಉಲ್ಲೇಖವಿರುವಂತೆ ಕಾಲಂ ನಂ 12 ರಲ್ಲಿ ಲಕ್ಷ್ಮನಾಯ್ಕ ಎಂಬ ಉಲ್ಲೇಖ ಯಾವ ಆಧಾರದ ಮೇಲೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ದಾವಾಸ್ತಿಯ ಹಿಂದಿನ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-11 ರ ಕ್ರಯಪತ್ರ ದಾವಾಸ್ತಿಗೆ ಸಂಬಂಧಪಟ್ಟ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ನಿಪಿ-1 ರಿಂದ 4 ಮತ್ತು 7 ರಿಂದ 10 ರಲ್ಲಿನ ಕಾಲಂ ನಂ 9 ರಲ್ಲಿ ನೆಕ್ಕೊಂಟಿ ಶೇಷರತ್ನಂ ಎನ್ನುವವರ ಹೆಸರು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ, ದಾವಾಸ್ತಿಯ ಕುರಿತು ವಾದಿಯ ಹೆಸರಿನಲ್ಲಿರುವ ಯಾವುದೇ ದಾಖಲೆಯನ್ನು ನಾನು ಇದುವರೆವಿಗೂ ನೋಡಿರುವುದಿಲ್ಲ. ಈ ದಾವೆಯ ಪ್ರತಿವಾದಿ ದಾವಾಸ್ತಿಯ ಪಹಣಿಗಳಲ್ಲಿ ನೆಕ್ಕೊಂಟಿ ಶೇಷರತ್ನಂ ಎಂಬ ಹೆಸರು ಬಂದಿರುವ ಕುರಿತು ತಿದ್ದುಪಡಿಗಾಗಿ ತಹಶೀಲ್ದಾರ್ ರವರಿಗೆ ಅರ್ಜಿಯನ್ನು ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿ ಕುರಿತು ಈ ಹಿಂದೆ ನಡೆದಿರುವ ಪಿಟಿಸಿಎಲ್ ಕಾಯ್ದೆಯಡಿ ನಡೆದಿರುವ ಪ್ರಕರಣದ ಕುರಿತು ನನಗೆ ಗೊತ್ತಿಲ್ಲ. ದಾವಾಸ್ತಿಯ ವಿಚಾರವಾಗಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ನಿಪಿ-12 ರಂತೆ ನಡೆದಿರುವ ಪ್ರಕರಣದ ಕುರಿತು ನನಗೆ ಮಾಹಿತಿ ಇಲ್ಲ. ಸದರಿ ನಿಪಿ-12 ರ ಆದೇಶ ಯಾರ ಪರವಾಗಿ ಆಗಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ನಾನು 50 ವರ್ಷಗಳಿಂದ ಪರಿಚಯ. ಸಾಕ್ಷಿ ಮುಂದುವರೆದು ಪ್ರತಿವಾದಿಯು ಸಹ ಪರಿಚಯವಿದ್ದಾರೆ ಎಂದು ನುಡಿಯುತಾರೆ, ನಮ್ಮ ಹಾಗೂ ವಾದಿ ಮತ್ತು ಪ್ರತಿವಾದಿಗಳ ಸಂಬಂಧ ಚೆನ್ನಾಗಿದೆ. ನನಗೆ ದಾವಾಸ್ತಿ ವಿಚಾರವಾಗಿ ಯಾವುದೇ ವೆಏಯಕ್ತಿಕ ಮಾಹಿತಿ ಇಲ್ಲದೆ ಇದ್ದರು ಸಹ ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ನನ್ನ ಜಮೀನನ್ನುಇತ್ತೀಚೆಗೆ ಸಾಗುಮಾಡುತ್ತಿರುವುದರಿಂದ ದಾವಾಸ್ತಿಯ ಕುರಿತುನನಗೆ ಯಾವುದೇಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.